ಮಾಡಿದರು. ಕೊನೆಗೆ ಬೌದ್ಧಮತವನ್ನು ಕೂಡ ಅದು ಇದ್ದ ಹಾಗೆ ಸ್ವೀಕರಿಸಲು ಅವರ ವೈಚಾರಿಕತೆ ಬಿಡಲಿಲ್ಲ. ಆದರೆ, ನವಬೌದ್ಧರು ಅಂಬೇಡ್ಕರರ ವೈಚಾರಿಕ ಆಧ್ಯಾತ್ಮಿಕತೆಗಿಂತ ಭಾವುಕತೆಗೆ ಹೆಚ್ಚು ಜೋತುಬಿದ್ದಂತೆ ಕಾಣಿಸುತ್ತದೆ!

ಕ್ಯಾಲ್ಗರಿ ವಿಶ್ವವಿದ್ಯಾಲಯದಲ್ಲಿ ನಡೆದ ಅಂಬೇಡ್ಕರ್ ಜಯಂತಿಗೆ ಅವರ ಮರಿಮೊಮ್ಮಗನಾದ ರಾಜರತ್ನ ಅಂಬೇಡ್ಕರ್ ಅವರನ್ನು ವಿಶೇಷವಾಗಿ ಆಹ್ವಾನಿಸಲಾಗಿತ್ತು. ಅಂಬೇಡ್ಕರ್ ಕುಟುಂಬದ ಬಗ್ಗೆ ಹೆಚ್ಚಿನವರಿಗೆ ತಿಳಿದಿಲ್ಲ. ಇದ್ದುದರಲ್ಲಿ ಹೆಚ್ಚು ಕಾಣಿಸಿಕೊಳ್ಳುವ ಪ್ರಕಾಶ್ ಅಂಬೇಡ್ಕರ್ ಅವರ ಬಗ್ಗೆ ಇವರಿಗೆ ಹೆಚ್ಚಿನ ಗೌರವವಿಲ್ಲ ಎಂದೆನಿಸಿತು. ಅಂಬೇಡ್ಕರ್ ಅವರಂತೆ ರಾಜರತ್ನ ವಿಶ್ವದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಓದಿ ಪದವಿ ಪಡೆದವರಲ್ಲವಾದರೂ, ಅರ್ಥಶಾಸ್ತ್ರದಲ್ಲಿ ತರಬೇತಿ ಪಡೆದಿದ್ದಾರೆ. ಇಂಗ್ಲಿಷ್‌ಗಿಂತ ಹಿಂದಿಯಲ್ಲಿ ಹೆಚ್ಚು ಸುಲಲಿತವಾಗಿ ಮಾತನಾಡಬಲ್ಲರು. ಅಪಾರ ಸಂಯಮದ, ವಿನಮ್ರ ವ್ಯಕ್ತಿ. 1955ರಲ್ಲಿ ಅಂಬೇಡ್ಕರ್ ಸ್ಥಾಪಿಸಿದ 'ಬುದ್ಧಿಸ್ಟ್ ಸೊಸೈಟಿ ಆಫ್ ಇಂಡಿಯಾ'ವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಅವರ ಪ್ರಕಾರ, ಹೆಚ್ಚೂ ಕಡಿಮೆ ಪ್ರತಿ ದಿನವೂ ತಳ ಸಮುದಾಯಗಳ ಜನರು ಹೆಚ್ಚೆಚ್ಚು ಸಂಖ್ಯೆಯಲ್ಲಿ ಬೌದ್ಧರಾಗುತ್ತಿದ್ದಾರೆ. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಉತ್ತರ ಪ್ರದೇಶ, ಬಿಹಾರದಂತಹ ರಾಜ್ಯಗಳಲ್ಲಿ ದಲಿತ ಚಳವಳಿಗಳು ಸಕ್ರಿಯವಾಗಿದ್ದೂ ಬೌದ್ಧ ಮತಾಂತರವನ್ನೆಂದೂ ದೊಡ್ಡದಾಗಿ ಉತ್ತೇಜಿಸಿಲ್ಲ ಅನ್ನುವುದನ್ನು ಗಮನಿಸಬೇಕು. ಹಾಗಾಗಿ, ಕರ್ನಾಟಕದ, ಅದರಲ್ಲೂ ಮುಖ್ಯವಾಗಿ ಉತ್ತರ ಕರ್ನಾಟಕದ ದಲಿತರು ಮಹಾರಾಷ್ಟ್ರದ ನಾಗಪುರದಲ್ಲಿನ ದೀಕ್ಷಾಭೂಮಿಗೆ ಹೋಗಿ ಬೌದ್ಧಮತ ಸ್ವೀಕರಿಸುವುದುಂಟು. ಇಂದು ಇಡೀ ದೇಶದಲ್ಲಿ ಹೆಚ್ಚೆಂದರೆ ಹತ್ತು ಮಿಲಿಯನ್ ಬೌದ್ಧರಿರಬಹುದು. ಇವರಲ್ಲಿ ಶೇ. 90ರಷ್ಟು 'ಅಂಬೇಡ್ಕರ್‌ವಾದಿ' ಬೌದ್ಧರಾದರೆ, ಉಳಿದವರು ಹಿಮಾಲಯ ಪ್ರಾಂತ್ಯಗಳಲ್ಲಿ ವಾಸಿಸುವ ಮೂಲ ಬೌದ್ಧರು. ಮತ್ತೆ ಕೆಲವರು ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಶ್ರೀಲಂಕಾದ ಅನಗರಿಕ ಧರ್ಮಪಾಲ ಕಲ್ಕತ್ತಾದಲ್ಲಿ ಸ್ಥಾಪಿಸಿದ 'ಮಹಾಬೋಧಿ ಸೊಸೈಟಿ'ಯ ಮೂಲಕ ಬೌದ್ಧರಾದವರು. ಮರಾಠಿ ಬೌದ್ಧರೆಂದರೆ ಬಹುಪಾಲು ಮಹಾರರು. ಕೆಲವರಷ್ಟೇ ಮಾತಂಗ ಹಾಗೂ ಮರಾಠ ಸಮುದಾಯದವರು.

ರಾಜರತ್ನ, ತಮ್ಮ ಒಂದು ಗಂಟೆಯ ಭಾಷಣದಲ್ಲಿ ತಮ್ಮ ವೈಚಾರಿಕ ತಿಳಿವನ್ನು ಹಂಚಿಕೊಂಡರು. ಹೊಸತೇನನ್ನೂ ಹೇಳದೇ ಹೋದರೂ ಈ ವ್ಯಕ್ತಿಯ ಹೃದಯ ಶುದ್ಧವಿದೆ ಅನಿಸಿತು. ಆದರೆ, "ಇನ್ನಾದರೂ ಅಸ್ಪೃಶ್ಯ ಜಾತಿಗಳು ಈ ದಲಿತ ಐಡೆಂಟಿಟಿಯನ್ನು ತೊರೆದು, 'ಮೂಲನಿವಾಸಿಗಳು' ಎಂಬ ಐಡೆಂಟಿಟಿಯನ್ನು ತಮ್ಮದಾಗಿಸಿಕೊಳ್ಳಬೇಕು" ಎಂಬ ಗೊಂದಲಮಯ ಕರೆಯನ್ನಿತ್ತರು. ಅವರು ಹಾಗೆ ಹೇಳಲು ಕಾರಣ, ದಲಿತ ಎಂಬ ಐಡೆಂಟಿಟಿಯ ಹಿಂದಿರುವ ಕೀಳರಿಮೆ ಹಾಗೂ ಶೋಷಣೆ, ಅವಮಾನ, ಅತ್ಯಾಚಾರಗಳ 'ಚಾರಿತ್ರಿಕ ಭಾರ.' ಇದು ನಗರವಾಸಿಗಳಾಗಿರುವ ಮಧ್ಯಮ ವರ್ಗದ ಶಿಕ್ಷಿತ ಅಸ್ಪೃಶ್ಯ ಸಮುದಾಯಗಳು ಕಾಲದಿಂದಲೂ ಮಂಡಿಸಿಕೊಂಡು ಬಂದಿರುವ ವಾದ. ಹಾಗಾಗಿಯೇ, 'ದಲಿತ' ಅನ್ನುವುದಕ್ಕಿಂತ 'ಬೌದ್ಧ' ಅಥವಾ 'ಬಹುಜನ' ಅನ್ನುವ ಐಡೆಂಟಿಟಿ ಗೌರವ, ಘನತೆಯುಳ್ಳದ್ದೆಂಬುದು ಅಂತಹ ವರ್ಗದ ವಾದ. ಅದೇ ವಾದವನ್ನು ನಮ್ಮ ಮಾತುಕತೆಯ ನಡುವೆ ಯುವರಾಜ್ ಅವರ ಕೆನಡಾದಲ್ಲೇ ಹುಟ್ಟಿ ಬೆಳೆದು ಶಿಕ್ಷಣ ಪಡೆದು ಈಗ 12ನೇ ತರಗತಿಯಲ್ಲಿರುವ ಮಗಳು ಕೂಡ ಮಂಡಿಸಿದ್ದುಂಟು. ಆ ಹುಡುಗಿಗೆ ಸುಲಭವಾಗಿ ಅರ್ಥ ಮಾಡಿಸಲೆಂದು ನಾನು ಆಫ್ರಿಕನ್ ಅಮೆರಿಕನ್ ನಾಗರಿಕ ಹಕ್ಕುಗಳ ಹೋರಾಟಗಾರ ಮಾಲ್ಕಮ್ ಎಕ್ಸ್ ಹೇಗೆ ಅಮೆರಿಕದಲ್ಲಿ ನೆಲೆಸಿರುವ ಆಫ್ರಿಕ ಮೂಲದ ಬ್ಲ್ಯಾಕ್ಸ್‌ಗೆ ಉಪನಾಮವಾಗಿ ನೀಡಲಾಗುವ ವೈಟ್ ಸ್ಲೇವ್ ಮಾಸ್ಟರ್‌ನ ಉಪನಾಮವನ್ನು ತ್ಯಜಿಸಿ, ತಾನು ಎಂದೂ ತಿಳಿಯಲಾಗದ ಆಫ್ರಿಕನ್ ಕುಟುಂಬದ ಹೆಸರಿನ ಬದಲು 'ಎಕ್ಸ್' ಎಂಬುದನ್ನು ಆಯ್ಕೆಮಾಡಿಕೊಂಡ ಎಂಬ ಉದಾಹರಣೆಯನ್ನು ನೀಡಿದೆ. ಆದರೆ ಈ ನೀಗ್ರೋ, ಬ್ಲ್ಯಾಕ್ ಹಾಗೂ ಆಫ್ರಿಕನ್ ಅಮೆರಿಕನ್ ಎಂಬ ಐಡೆಂಟಿಟಿಗಳು 'ದಲಿತ' ಎಂಬ ಐಡೆಂಟಿಟಿಯಂತೆ ಆ ಸಮುದಾಯ ಸ್ವಯಂ ಕೊಟ್ಟುಕೊಂಡಿರುವಂತದ್ದಲ್ಲ ಎಂಬುದನ್ನು ಗಮನಿಸಬೇಕು ಎಂದು ಹೇಳಿದೆ.